**ಕರ್ನಾಟಕ ಸರ್ಕಾರ**

**ವಿದ್ಯುತ್ ಪರಿವೀಕ್ಷಣಾಲಯ**

**ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 4(1)(ಬಿ)ರ ಪ್ರಕಾರ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪಶ್ಚಿಮ ಕಛೇರಿ, ಇದಕ್ಕೆ ಸಂಬಂಧಪಟ್ಟ ಮಾಹಿತಿ :**

**I.**ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಗೆ ಸೇರಿದ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರು ಹೆಚ್ಚುವರಿ ಪಶ್ಚಿಮ, ಇಲ್ಲಿ ಕೈಗೊಳ್ಳುವ ಕೆಲಸಕಾರ್ಯಗಳು ಹಾಗು ಕರ್ತವ್ಯಗಳ ವಿವರಗಳು:

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ನಾಗರಭಾವಿ ಮುಖ್ಯ ರಸ್ತೆ, 2ನೇ ಹಂತ, 12ನೇ ಬ್ಲಾಕ್, ನಂ. 221 ಜೆನಿತ್ ಕಟ್ಟಡದ ಒಂದನೇ ಮಹಡಿಯಲ್ಲಿ ಖಾಸಗಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಈ ಕಛೇರಿಯ ವ್ಯಾಪ್ತಿಗೆ ಬೆಂಗಳೂರು ನಗರ ಜಿಲ್ಲೆಯ ಡಬ್ಲ್ಯೂ-3, ಡಬ್ಲ್ಯೂ-4, ಡಬ್ಲ್ಯೂ-5, ಎನ್-6, ಎನ್-8, ಎನ್-10 ಮತ್ತು ತಾವರೆಕೆರೆ ಉಪವಿಭಾಗಗಳನ್ನು ಒಳಗೊಂಡಿರುತ್ತದೆ ಹಾಗೂ ರಾಮನಗರ ಜಿಲ್ಲೆಯು ಇದರ ವ್ಯಾಪ್ತಿಯಲ್ಲಿರುತ್ತದೆ. ರಾಮನಗರ ಜಿಲ್ಲೆಯ ಕಛೇರಿಯಲ್ಲಿ ಉಪ ವಿದ್ಯುತ್ ಪರಿವೀಕ್ಷಕರು ಕಛೇರಿಯ ಮುಖ್ಯಸ್ಥರಾಗಿರುತ್ತಾರೆ.

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪಶ್ಚಿಮ ಕಛೇರಿಯ ಕ್ಷೇತ್ರೀಯ ತಾಂತ್ರಿಕ ವರ್ಗದಲ್ಲಿ, ಒಂದು ವಿದ್ಯುತ್ ಪರಿವೀಕ್ಷಕರ ಹುದ್ದೆ, ಒಂದು ಉಪ ವಿದ್ಯುತ್ ಪರಿವೀಕ್ಷಕರ ಹುದ್ದೆ ಹಾಗೂ ಎರಡು ಸಹಾಯಕ ವಿದ್ಯುತ್ ಪರಿವೀಕ್ಷಕರ ಹುದ್ದೆಗಳು ಇರುತ್ತವೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿಯ ತಾಂತ್ರಿಕ ಕೆಲಸಗಳನ್ನು ನಿರ್ವಹಿಸಲು ಒಂದು ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ) ಹುದ್ದೆ ಇರುತ್ತದೆ. ಕಛೇರಿಯ ಆಡಳಿತ ಸಿಬ್ಬಂದಿ ವರ್ಗದಲ್ಲಿ ಒಂದು ಅಧೀಕ್ಷಕರ ಹುದ್ದೆ, ಒಂದು ಪ್ರಥಮ ದರ್ಜೆ ಸಹಾಯಕರ ಹುದ್ದೆ ಹಾಗೂ ಎರಡು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳು, ವಾಹನ ಚಾಲಕರು, ಕಂಪ್ಯೂಟರ್ ಆಪರೇಟರ್, ಗ್ರೂಪ್-ಡಿ ಹುದ್ದೆಗಳು ಇರುತ್ತವೆ.

ಈ ಇಲಾಖೆಯ ಮತ್ತು ಕಛೇರಿಯ ಮುಖ್ಯ ಉದ್ದೇಶ, ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ನಡೆಸಿ, ಗ್ರಾಹಕರು ಹಾಗೂ ಸರಬರಾಜುದಾರರು ವಿದ್ಯುತ್ ಸುರಕ್ಷತೆಯನ್ನು ಕಾಪಾಡುತ್ತಿರುವ ಬಗ್ಗೆ ಪರಿವೀಕ್ಷಣೆ ನಡೆಸುವುದಾಗಿದೆ. ಅಲ್ಲದೇ ವಿದ್ಯುಚ್ಛಕ್ತಿಯಿಂದ ಮಾನವರಿಗೆ, ಪ್ರಾಣಿಗಳಿಗೆ ಹಾಗೂ ಆಸ್ತಿಪಾಸ್ತಿಗಳಿಗೆ ಹಾನಿ ಉಂಟಾಗದಂತೆ ಗಮನಹರಿಸುವುದಾಗಿದೆ.

ಈ ಮೇಲಿನ ಉದ್ದೇಶ ಸಾಧನೆಗೆ ಸಂಬಂಧಪಟ್ಟಂತೆ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರು ಹೆಚ್ಚುವರಿ ಪಶ್ಚಿಮ, ಈ ಕೆಳಗಿನಂತೆ ಕಾರ್ಯನಿರ್ವಹಿಸುತ್ತದೆ.

1. ಅಧಿಕಾರ ಪ್ರತ್ಯಾಯೋಜನೆಯ ಅನುಸಾರ ಹೆಚ್.ಟಿ ಸ್ಥಾವರ, ವಿದ್ಯುತ್‌ಜನಕ, 24ಮೀ ಎತ್ತರದವರೆಗಿನ ಬಹುಮಹಡಿ ಕಟ್ಟಡಗಳು(ಪರಿವರ್ತಕದ ಅಥವಾ ವಿದ್ಯುತ್‌ಜನಕದ ಸಾಮರ್ಥ್ಯ 2000ಕೆವಿ.ಎ ಮೀರದಿದ್ದರೇ ಮಾತ್ರ ಲಿಫ್ಟ್/ಎಸ್ಕಲೇಟರ್‌ಗಳ ಸ್ಥಾಪಿಸಲು ಅನುಮತಿಯನ್ನು ನೀಡುವುದು. ಪರಿವೀಕ್ಷಣೆ ಹಾಗೂ ಚಾಲನಾ ಅನುಮೋದನೆ ನೀಡುವುದು, ಮತ್ತು ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರುರವರಿಗೆ ಶಿಫಾರಸ್ಸು ಪತ್ರ ಸಲ್ಲಿಸುವುದು. ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಪಟ್ಟ ಪರಿವರ್ತಕ ಕೇಂದ್ರಗಳ ಹಾಗೂ ವಿದ್ಯುತ್ ಮಾರ್ಗಗಳ ಪರಿವೀಕ್ಷಣೆ ಮತ್ತು ಅನುಮೋದನೆ ಅಧಿಕಾರಿ ಪ್ರತಿನಿಯೋಜನೆ ಅನುಸಾರ 66 ಕೆವಿಸಾಮರ್ಥ್ಯದವರೆಗಿನ ಬೆಸ್ಕಾಂ/ಕೆ.ಪಿ.ಟಿ.ಸಿ.ಎಲ್. ಉಪಕೇಂದ್ರಗಳ ನಕ್ಷೆ ಹಾಗೂ ಪರಿವೀಕ್ಷಣೆ, ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ನಿರ್ವಹಿಸುವ ಒಟ್ಟು 2000ಕೆ.ವಿ.ಎ. ಸಾಮರ್ಥ್ಯದವರೆಗಿನ ಪರಿವರ್ತಕ ಕೇಂದ್ರಗಳ ನಕ್ಷೆ ಅನುಮೋದನೆ ಹಾಗು ಚಾಲನಾ ಅನುಮೋದನೆ ಮತ್ತು ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಚಾಲನಾ ಅನುಮೋದನೆಯ ಕಾರ್ಯ ವೈಖರಿಯನ್ನು ನಿರ್ವಹಿಸುತ್ತದೆ.

1. ವಿದ್ಯುತ್ ಬಳಕೆದಾರರ ಮತ್ತು ಸರಬರಾಜುದಾರರು ವಿದ್ಯುತ್ ಸ್ಥಾವರಗಳನ್ನು ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 2003 ಹಾಗೂ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ (ವಿದ್ಯುತ್ ಸುರಕ್ಷತಾ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಕ್ರಮಗಳು) ಅಧಿನಿಯಮಗಳು 2010ರ ಅನುಗುಣವಾಗಿ ಸ್ಥಾಪಿಸುವುದು ಕಡ್ಡಾಯವಾಗಿರುವುದರಿಂದ ನಿಯಮಗಳ ಪ್ರಕಾರ ವಿದ್ಯುತ್ ಮಾರ್ಗಗಳು, ವಿತರಣಾ ಕೇಂದ್ರಗಳು, ಅಧಿಕ ಒತ್ತಡ ಸ್ಥಾವರ, ವಿದ್ಯುತ್ ಜನಕಗಳು ಮತ್ತು ಬಹುಮಹಡಿ ಕಟ್ಟಡ, ಲಿಫ್ಟ್/ಎಸ್ಕಲೇಟರ್‌ಗಳು, ತಾತ್ಕಾಲಿಕ ವಿದ್ಯುತ್ ಸ್ಥಾವರಗಳನ್ನು ಅನುಮೋದಿತ ನೀಲಿ ನಕ್ಷೆಯ ಪ್ರಕಾರ ಸ್ಥಾಪಿಸುವಂತೆ ತಿಳುವಳಿಕೆ ಹಾಗೂ ಸಲಹೆ ನೀಡುವುದು.

1. ಬೆಸ್ಕಾಂ ವಿದ್ಯುತ್ ಸರಬರಾಜುದಾರರ ವ್ಯಾಪ್ತಿಯಲ್ಲಿ ಬರುವ ಎಲ್ಲಾ 66ಕೆವಿ ವಿದ್ಯುತ್ ವಿತರಣಾ ಕೇಂದ್ರ ಮತ್ತು ಅದಕ್ಕಿಂತ ಕೆಳಗಿನ ಒತ್ತಡದ ವಿದ್ಯುತ್ ಮಾರ್ಗಗಳ, ಇಹೆಚ್‌ವಿ/ಹೆಚ್‌ವಿ/ಎಮ್‌ವಿ ವಿದ್ಯುತ್ ಮಾರ್ಗಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ಅನುಮೋದನೆ.
2. ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ನಿರ್ವಹಿಸುವ ಒಟ್ಟು 2000ಕೆ.ವಿ.ಎ. ಸಾಮರ್ಥ್ಯದವರೆಗಿನ ಪರಿವರ್ತಕ ಕೇಂದ್ರಗಳ ನಕ್ಷೆ ಅನುಮೋದನೆ ಹಾಗು ಚಾಲನಾ ಅನುಮೋದನೆ
3. ಅಧಿಕಾರ ಪ್ರತ್ಯಾಯೋಜನೆಯ ಅನುಸಾರ ಲಿಫ್ಟ್‌ಗಳು/ಎಸ್ಕಲೇಟರಗಳು/ಟ್ರ್ಯಾವಲೇಟರ್ಸ್‌ಗಳ ಸ್ಥಾಪನಾ ಅನುಮೋದನೆ ಮತ್ತು ಪರಿವೀಕ್ಷಣೆ ಮತ್ತು ಶಿಫಾರಸ್ಸು.
4. ಅಧಿಕಾರ ಪ್ರತ್ಯಾಯೋಜನೆಯ ಅನುಸಾರ 24ಮೀಎತ್ತರದವರೆಗಿನ ಬಹುಮಹಡಿ ಕಟ್ಟಡಗಳು(ಪರಿವರ್ತಕದ ಅಥವಾ ವಿದ್ಯುತ್‌ಜನಕದ ಸಾಮರ್ಥ್ಯ 2000ಕೆವಿ.ಎ ಮೀರದಿದ್ದರೇ ಮಾತ್ರ) ಹಾಗೂ2000ಕೆ.ವಿ.ಎ. ಸಾಮರ್ಥ್ಯದವರೆಗಿನ ಹೆಚ್.ಟಿ ಸ್ಥಾವರ, ವಿದ್ಯುತ್‌ಜನಕ ಇವುಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ಅನುಮೋದನೆ.
5. ಅಧಿಕಾರ ಪ್ರತ್ಯಾಯೋಜನೆಯ ಅನುಸಾರಖಾಯಂ ಚಿತ್ರ ಮಂದಿರ ಪರಿವೀಕ್ಷಣೆ.
6. 5 ರಿಂದ 8 ಜನ ಮಾನವರನ್ನೊಳಗೊಂಡ ಮಾರಕ (ಮರಣಾಂತಿಕ), ಎಲ್ಲಾ ಪ್ರಾಣಿಗಳಿಗೆ ಮಾರಕ, ಮಾನವರಿಗೆ ಅಮರಣಾಂತಿಕ ವಿದ್ಯುತ್ ಅಪಘಾತಗಳ ತನಿಖೆ ನಡೆಸುವುದು ಮತ್ತು ಸರ್ಕಾರಕ್ಕೆ ತನಿಖಾ ವರದಿಯನ್ನು ಸಲ್ಲಿಸುವುದು.
7. ಅಧಿಕಾರಿಗಳ ಕಾರ್ಯವ್ಯಾಪ್ತಿಗೆ ಬರುವ ಎಲ್ಲಾ ವಿದ್ಯುತ್ ಮಾಪನಗಳ ಖಚಿತತೆ ಬಗ್ಗೆ ನಡೆಯುವ ತಪಾಸಣೆಯಲ್ಲಿ ಸಾಕ್ಷಿಕರಿಸುವುದು.
8. ಈ ಇಲಾಖೆಯ ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 2003 ಹಾಗೂ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ (ವಿದ್ಯುತ್ ಸುರಕ್ಷತಾ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಕ್ರಮಗಳು) ಅಧಿನಿಯಮಗಳು 2010 ರ ಪ್ರಕಾರ ಎಲ್ಲಾ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ಕರ್ನಾಟಕ ಸರಕಾರ ಇಂಧನ ಇಲಾಖೆ ಅಧಿಸೂಚನೆ ಸಂ.ಇ.ಎನ್ 5 ಇ.ಬಿ.ಎಸ್ 2012 ದಿ:12.09.2013ರ ಪ್ರಕಾರ ಆಯಾ ಅಧಿಕಾರಿಗಳು ಅವರವರ ಕಾರ್ಯವ್ಯಾಪ್ತಿ ಮತ್ತು ಅಧಿಕಾರ ವ್ಯಾಪ್ತಿಯ ಅನುಸಾರವಾಗಿ ನಡೆಸುತ್ತಾರೆ.
9. ಈ ಇಲಾಖೆಯು ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 2003 ಹಾಗೂ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ (ವಿದ್ಯುತ್ ಸುರಕ್ಷತಾ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಕ್ರಮಗಳು) ಅಧಿನಿಯಮಗಳು 2010 ರ ಪ್ರಕಾರ ಅಗತ್ಯವಿರುವ ಕರ್ನಾಟಕ (ವಿದ್ಯುತ್ ಗುತ್ತಿಗೆದಾರರು, ವಿಶೇಷ ತಂತಿ ರಹದಾರಿ ಅನುಮತಿ ಮತ್ತು ಮೇಲ್ವಿಚಾರಕರು ಮತ್ತು ವೈರ್‌ಮನ್‌ಗಳ ಪರವಾನಿಗೆ ಮತ್ತು ಅನುಮತಿ) ನಿಯಮಗಳು 2012 ಅನ್ನು ಜಾರಿಗೊಳಿಸಿರುತ್ತದೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪಶ್ಚಿಮ ರವರ ವ್ಯಾಪ್ತಿಗೆ ಸಂಬಂಧಪಟ್ಟ ಅರ್ಜಿಗಳನ್ನು ಆನ್ ಲೈನ್ ಮೂಲಕ ಉಪ ವಿಭಾಗಗಳಲ್ಲೇ ಸ್ವೀಕರಿಸಿ ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರಿಗೆ ಆನ್ ಲೈನ್ ಮೂಲಕ ರವಾನೆ ಮಾಡಲಾಗುವುದು. ಹಾಗೂ ಆನ್ ಲೈನ್ ಮೂಲಕ ಉಪ ವಿಭಾಗ ಹಂತದಲ್ಲಿ ಮೇಲ್ವಿಚಾರಕರ ಮತ್ತು ತಂತಿ ರಹದಾರಿ ಹಿಂಬರಹಗೊಳಿಸುವುದು.
10. ಸಿನಿಮಾ ಆಪರೇಟರ್‌ಗಳ ಪರವಾನಗಿಗಳನ್ನು ನವೀಕರಣ/ಹಿಂಬರಹವನ್ನು ಆಯಾ ವಿಭಾಗವಾರು ಕಛೇರಿಗಳಲ್ಲಿ ಮಾಡಲಾಗುವುದು.

II.ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರು ಹೆಚ್ಚುವರಿ ಪಶ್ಚಿಮ, ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು:

**ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪಶ್ಚಿಮ.**

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪಶ್ಚಿಮ ಕಛೇರಿಯ ಆಡಳಿತ ಮುಖ್ಯಸ್ಥರಾಗಿರುತ್ತಾರೆ ಮತ್ತು ಕಛೇರಿಯ ಕಾರ್ಯ ನಿರ್ವಹಣೆಗೆ ಜವಾಬ್ದಾರರಾಗಿರುತ್ತಾರೆ. ಇವರ ಅಧೀನದಲ್ಲಿ ಬರುವ ಕಛೇರಿಗಳ ಕಾರ್ಯವೈಖರಿ, ಕಾರ್ಯಸಾಧನೆ ಇತ್ಯಾದಿಗಳ ಪರಿಶೀಲನೆ ಇವರ ವ್ಯಾಪ್ತಿಯಲ್ಲಿ ಬರುತ್ತದೆ. ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ತಾಂತ್ರಿಕ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಸದರಿ ಆಡಳಿತಾಧಿಕಾರಿರವರ ಅಧೀನದಲ್ಲಿರುತ್ತಾರೆ. ಅಧಿಕಾರ ಪ್ರತ್ಯಾಯೋಜನೆಯಅನುಸಾರ ವಿವಿಧ ರೀತಿಯ ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆ ಅನುಮೋದನೆ ಮತ್ತು ಸ್ಥಾವರಗಳ ಚಾಲನೆಗೆ ಅನುಮತಿ ನೀಡುವುದು,ಅಧಿಕಾರ ಪ್ರತ್ಯಾಯೋಜನೆಯ ಅನುಸಾರ ಲಿಫ್ಟ್ ಸ್ಥಾವರಗಳ ಪ್ರಥಮ ಪರಿವೀಕ್ಷಣೆಯನ್ನು

ನಡೆಸಿ, ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರುರವರಿಗೆ ಶಿಫಾರಸ್ಸು ಪತ್ರವನ್ನು ಸಲ್ಲಿಸುವುದು, ಅಲ್ಲದೇ ಅಧಿಕಾರ ಪ್ರತ್ಯಾಯೋಜನೆಯಪ್ರಕಾರ ವಿವಿಧ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ನಡೆಸುವುದು ಇವರ ಕರ್ತವ್ಯವಾಗಿರುತ್ತದೆ. ಕಛೇರಿಯ ಮಾಸಿಕ ಪ್ರಗತಿ ವರದಿ, ಕ್ರೋಡೀಕೃತ ಡಿಸಿಬಿ, ಕಛೇರಿಯ ಖರ್ಚು ವೆಚ್ಚ, ಖಜಾನೆಯ ಚಲನಿನ ಮರುಹೊಂದಾಣಿಕೆ ಹಾಗು ಅಧೀನ ಕಛೇರಿಗಳ ಕ್ರೋಢೀಕೃತ ವರದಿಗಳನ್ನು ಪರಿಶೀಲಿಸಿ ಕೇಂದ್ರ ಕಛೇರಿ/ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿಗೆ ಸಲ್ಲಿಸುವುದು ಇವರ ಜವಾಬ್ದಾರಿಯಾಗಿರುತ್ತದೆ. ಈ ಕಛೇರಿಯ ವೇತನ ಬಟವಾಡೆ ಹಾಗೂ ಕಛೇರಿಯ ಖರ್ಚುವೆಚ್ಚಗಳ ಜವಾಬ್ದಾರಿ ಇವರದಾಗಿರುತ್ತದೆ. ಯಾವುದೇ ಒಂದು ವಿದ್ಯುತ್ ಅಪಘಾತ5ಕ್ಕೆ ಮೇಲ್ಪಟ್ಟು 8 ಮಾನವರವರೆಗೆ ಸಂಭವಿಸುವ ವಿದ್ಯುತ್ ಅಪಘಾತಗಳ ತನಿಖೆ ಮಾಡಿ, ತನಿಖಾ ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸುವುದು,ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು ಹಾಗೂ ಇಲಾಖೆಯ ಮೇಲಾಧಿಕಾರಿಗಳು ವಹಿಸುವ ಕಛೇರಿ ಕೆಲಸಗಳನ್ನು ನಿರ್ವಹಿಸುವುದು ಇವರ ಜವಾಬ್ದಾರಿಯಾಗಿರುತ್ತದೆ. ಪ್ರತೀ ತಿಂಗಳ ಕೊನೆಯಲ್ಲಿ ಪ್ರಗತಿಯ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು,.ಸಾರ್ವಜನಿಕ ಮಾಹಿತಿ ಹಕ್ಕು, 2005ರ ಅಡಿ ಮೇಲ್ಮನವಿ ಪ್ರಾಧಿಕಾರಿಯಾಗಿ ಇವರು ಕಾರ್ಯನಿರ್ವಹಿಸುತ್ತಾರೆ.

**ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪಶ್ಚಿಮ.**

ವಿದ್ಯುತ್ ಪರಿವೀಕ್ಷಕರು,ಅಧಿಕಾರ ಪ್ರತಿ ನಿಯೋಜನೆ ಅನುಸಾರ ವಿವಿಧ ರೀತಿಯ ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆ ಅನುಮೋದನೆ ಮತ್ತು ಸ್ಥಾವರಗಳ ಚಾಲನೆಗೆ ಅನುಮತಿಯನ್ನು ನೀಡುವುದು, ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ನಡೆಸುವುದು ಇವರ ಕರ್ತವ್ಯವಾಗಿರುತ್ತದೆ. ವಿದ್ಯುತ್ ಪರಿವೀಕ್ಷಕರ ವ್ಯಾಪ್ತಿಗೆ ಬರುವ 1ಕ್ಕೆ ಮೇಲ್ಪಟ್ಟು 5 ಮಾನವರಿಗೆ ಸಂಭವಿಸುವ ವಿದ್ಯುತ್ ಅಪಘಾತಗಳ ತನಿಖೆ, ಬೆಂಕಿ ಅಪಘಾತಗಳ ತನಿಖೆ, ಆನೆಗಳಿಗೆ ಸಂಭವಿಸುವ ಮಾರಣಾಂತಿಕ ಅಪಘಾತಗಳ ತನಿಖೆಯನ್ನು ಮಾಡಿ, ತನಿಖಾ ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸುವುದು. ಪ್ರತೀ ತಿಂಗಳ ಕೊನೆಯಲ್ಲಿ ಪ್ರಗತಿಯ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು ಹಾಗು ಮುಖ್ಯ ವಿದ್ಯುತ್ ಪರಿವೀಕ್ಷಕರು ಮತ್ತು ಇಲಾಖೆಯ ಮೇಲಾಧಿಕಾರಿಗಳು ವಹಿಸುವ ಕಛೇರಿ ಕೆಲಸವನ್ನು ನಿರ್ವಹಿಸುವುದು ಇವರ ಜವಾಬ್ದಾರಿಯಾಗಿರುತ್ತದೆ. ಅಲ್ಲದೇ ಗಣ್ಯ ವ್ಯಕ್ತಿಗಳು ಭಾಗವಹಿಸುವ ವಿದ್ಯುತ್ ಸ್ಥಾವರಗಳ ಪರೀಶೀಲನೆಯನ್ನು ಮಾಡಿ ದೃಢೀಕರೀಸುವುದು, ನಿಗದಿತ ವಾಯಿದೆಯೊಳಗೆ ನೀಡಲ್ಪಟ್ಟ ಸಿನೆಮಾ ಆಪರೇಟರ್ ಪರ್ಮಿಟ್‌ಗಳ ನವೀಕರಣ ಹಾಗು ಹಿಂಬರಹಗೊಳಿಸುವ ಕಾರ್ಯ ನಿರ್ವಹಿಸುತ್ತಾರೆ ಹಾಗು ಗ್ರಾಹಕರುಗಳಿಂದ ಕಛೇರಿಗೆ ಸಲ್ಲಿಸಲ್ಪಡುವ ಎಲ್ಲಾ ಕಡತಗಳನ್ನು ಕಛೇರಿಯ ನಿಯಮಗಳನುಸಾರ ವಿಲೇವಾರಿ ಮಾಡುವ ಜವಾಬ್ದಾರಿ ಇವರದಾಗಿರುತ್ತದೆ. ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಸಾರ್ವಜನಿಕರು ಮಾಹಿತಿ ಹಕ್ಕಿನಡಿ ಕೇಳುವಂತಹ ಮಾಹಿತಿಯನ್ನು ಇವರು ನೀಡಬೇಕಾಗಿರುತ್ತದೆ.

**ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪಶ್ಚಿಮ.**

ಉಪ ವಿದ್ಯುತ್ ಪರಿವೀಕ್ಷಕರ ಅಧಿಕಾರ ವ್ಯಾಪ್ತಿಗೆ ಬರುವ ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆ ಅನುಮೋದನೆ/ ಚಾಲನೆಗೆ ಅನುಮತಿ ನೀಡುವುದು ಮತ್ತು ಈ ಸ್ಥಾವರದ ಸುರಕ್ಷತೆ ಬಗ್ಗೆ ಖಾತರಿ ಪಡಿಸಿಕೊಳ್ಳುವುದು ಹಾಗು ಅಧಿಕಾರ ಪ್ರತಿ ನಿಯೋಜನೆ ಅನುಸಾರ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ನಡೆಸುವುದು ಇವರ ಕರ್ತವ್ಯವಾಗಿರುತ್ತದೆ ಹಾಗು ಇತರೆ ಯಾವುದೇ ಮೇಲಾಧಿಕಾರಿಗಳು ವಹಿಸುವ ಕೆಲಸ ನಿರ್ವಹಿಸುವುದು. ಕಛೇರಿ ಮಾಸಿಕ ಪ್ರಗತಿ ವರದಿಗಳನ್ನು ಮೇಲಧಿಕಾರಿಗಳಿಗೆ ಮಂಡಿಸುವುದು, ಕಛೇರಿಯ ತಾಂತ್ರಿಕ ಕಡತಗಳ ಹಾಗೂ ವಹಿಗಳ ನಿರ್ವಹಣೆ, ಸದರಿಯವರ ಕಾರ್ಯವ್ಯಾಪ್ತಿಯ ವಿದ್ಯುತ್ ಸ್ಥಾವರಗಳ ಅಂಕಿ-ಅಂಶಗಳ ವಿವರಗಳನ್ನು ತಯಾರಿಸಿ ನಿರ್ವಹಿಸುವುದು, ಡಿಸಿಬಿ ಮತ್ತು ಎಫ್ ಮತ್ತು ಜಿ ನಮೂನೆ ಕಡತಗಳ ಉಸ್ತುವಾರಿ, ವಿದ್ಯುಚ್ಛಕ್ತಿ ತೆರಿಗೆಗಳ ವಸುಲಾತಿ, ಒಂದು ಸಂಖ್ಯೆ ಮಾನವನಿಗೆ ಸಂಭವಿಸುವ ಮಾರಣಾಂತಿಕ ವಿದ್ಯುತ್ ಅಪಘಾತ ಹಾಗು ಮನುಷ್ಯರಿಗೆ ಸಂಭವಿಸುವ ಮಾರಣಾಂತಿಕವಲ್ಲದ ವಿದ್ಯುತ್ ಅಪಘಾತಗಳ ತನಿಖೆಯನ್ನು ಮಾಡಿ, ತನಿಖಾ ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸುವುದು. ಇವರ ವ್ಯಾಪ್ತಿಗೆ ಬರುವ ತೆರಿಗೆ ವಸೂಲಾತಿ ಬಗ್ಗೆ ನೋಡಿಕೊಳ್ಳುವುದು ಹಾಗು ಮೇಲಾಧಿಕಾರಿಗಳು ವಹಿಸುವ ಇತರೆ ಕೆಲಸಗಳನ್ನು ನಿರ್ವಹಿಸುವುದು. ಇಲಾಖಾ ವತಿಯಿಂದ ಪ್ರತಿ ವರ್ಷ ನಡೆಯುವ ಮೇಲ್ವಿಚಾರಕರ, ತಂತಿ ರಹದಾರಿ ಪರೀಕ್ಷಾ ಅರ್ಜಿಗಳ ಉಸ್ತುವಾರಿ ನೋಡಿಕೊಳ್ಳುವುದು. ವಿದ್ಯುತ್ ಗುತ್ತಿಗೆದಾರರ ಪರವಾನಿಗೆಗಳ, ವಿದ್ಯುತ್ ಮೇಲ್ವಿಚಾರಕರ ಹಾಗೂ ತಂತಿ ಕೆಲಸಗಾರರ ಹೊಸ ಮತ್ತು ನವೀಕರಣದ ಅರ್ಜಿಗಳನ್ನು ಪರಿಶೀಲಿಸಿ, ಸ್ವೀಕರಿಸಿ ಕೇಂದ್ರ ಕಛೇರಿಗೆ ರವಾನಿಸುವುದು. ವಿದ್ಯುತ್ ಮೇಲ್ವಿಚಾರಕರು ಹಾಗೂ ತಂತಿ ಕೆಲಸಗಾರರ ರಹದಾರಿಗಳನ್ನು ವಿದ್ಯುತ್ ಗುತ್ತಿಗೆದಾರರ ಪರವಾನಿಗೆಗಳಿಗೆ ಹಿಂಬರಹ ಮಾಡುವುದು. ವಿಶೇಷ ತಂತಿ ಕೆಲಸಗಾರರ ಹೊಸ ಮತ್ತು ನವೀಕರಣ ಅರ್ಜಿಗಳ ಪರಿಶೀಲನೆ ಮಾಡುವುದು ಹಾಗು

ಕೇಂದ್ರ ಕಛೇರಿಗೆ ರವಾನಿಸುವುದು. ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಸಾರ್ವಜನಿಕರು ಮಾಹಿತಿ ಹಕ್ಕಿನಡಿ ಕೇಳುವಂತಹ ಮಾಹಿತಿಯನ್ನು ಇವರು ನೀಡಬೇಕಾಗಿರುತ್ತದೆ.

**ಸಹಾಯಕ ವಿದ್ಯುತ್ ಪರಿವೀಕ್ಷಕರು (ಕ್ಷೇತ್ರೀಯ)–1 ಮತ್ತು 2, ಬೆಂಗಳೂರು ಹೆಚ್ಚುವರಿ ಪಶ್ಚಿಮ.**

ಇವರ ಕಾರ್ಯ ವ್ಯಾಪ್ತಿಗೆ ಬರುವ ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟ ವಿದ್ಯುತ್ ಪರಿವರ್ತಕ ಕೇಂದ್ರಗಳ, ಲೈನ್‌ಗಳ ಪರಿವೀಕ್ಷಣೆ ನಡೆಸಿ ಚಾಲನೆಗೆ ಅನುಮತಿ ನೀಡಲು ಉಪ ವಿದ್ಯುತ್ ಪರಿವೀಕ್ಷಕರಿಗೆ ವರದಿ ಮಾಡುವುದು ಹಾಗು ಅಧಿಕಾರ ಪ್ರತಿ ನಿಯೋಜನೆ ಅನುಸಾರ ವಿದ್ಯುತ್ ಪರಿವರ್ತಕ ಕೇಂದ್ರಗಳ, ಲೈನ್‌ಗಳ ನಿಯತಕಾಲಿಕ ಪರಿವೀಕ್ಷಣೆ ಹಾಗೂ ವಿದ್ಯುತ್ ಜನಕಗಳ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ನಡೆಸುವುದು. ಕಛೇರಿಯ ಮಾಸಿಕ ಪ್ರಗತಿ ವರದಿ ತಯಾರಿಸುವಲ್ಲಿ ಮೇಲಾಧಿಕಾರಿಗಳಿಗೆ ಸಹಕರಿಸುವುದು ಹಾಗು ವಿದ್ಯುತ್ ಸ್ಥಾವರಗಳ ಕಡತಗಳ ಅಂಕಿಅಂಶಗಳ ಮಾಹಿತಿ ತಯಾರಿಸುವುದು ಹಾಗು ನಿರ್ವಹಿಸುವುದು, ಪ್ರಾಣಿಗಳಿಗೆ ಮಾರಣಾಂತಿಕವಾದ ವಿದ್ಯುತ್ ಅಪಘಾತಗಳ ತನಿಖೆ ಮಾಡುವುದು ಹಾಗು ಉಪ ವಿದ್ಯುತ್ ಪರಿವೀಕ್ಷಕರಿಗೆ ವರದಿ ಸಲ್ಲಿಸುವುದು. ಮೇಲಾಧಿಕಾರಿಗಳು ವಹಿಸುವ ಇತರೆ ಕೆಲಸಗಳನ್ನು ನಿರ್ವಹಿಸುವುದು. ವಿದ್ಯುತ್ ಸ್ಥಾವರಗಳ ಅಂಕಿ–ಅಂಶಗಳ ವಿವರಗಳನ್ನು ತಯಾರಿಸಿ ನಿರ್ವಹಿಸುವುದು, ಡಿಸಿಬಿ ನಮೂನೆ ತಯಾರಿಸುವಲ್ಲಿ ಮೇಲಾಧಿಕಾರಿಗಳಿಗೆ ಸಹಾಯ ಮಾಡುವುದು.

**ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ)ಬೆಂಗಳೂರು ಹೆಚ್ಚುವರಿ ಪಶ್ಚಿಮ.**

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪಶ್ಚಿಮ ಕಾರ್ಯವ್ಯಾಪ್ತಿಯ ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆ ಅನುಮೋದನೆ, ತಾಂತ್ರಿಕ ವರದಿಗಳನ್ನು ತಯಾರಿಸುವುದು, ನ್ಯೂನತೆ ಪತ್ರಗಳನ್ನು ಸಿದ್ಧಪಡಿಸುವುದು. ಬೆಂಕಿ ಅಪಘಾತಗಳ ತನಿಖಾ ವರದಿಯನ್ನು ಅಂತಿಮಗೊಳಿಸಲು ವರದಿಯನ್ನು ತಯಾರಿಸುವುದು. ಮಾಸಿಕ ಕಛೇರಿಯ ಪ್ರಗತಿ ವರದಿ ತಯಾರಿಸುವುದು ಮತ್ತು ವಿಭಾಗದ ಎಲ್ಲಾ ಸ್ಥಾವರಗಳ ಅಂಕಿ ಅಂಶಗಳ ವರದಿಯನ್ನು ನಿರ್ವಹಿಸುವುದು. ಕಛೇರಿಯ ತಾಂತ್ರಿಕ ಸರ್ಕಾರಿ ವಾಹನಗಳ ಕಡತಗಳ ಹಾಗೂ ವಹಿಗಳ ನಿರ್ವಹಣೆ, ಮತ್ತು ಮೇಲಾಧಿಕಾರಿಗಳ ನಿರ್ದೇಶನದಂತೆ ಇತರೆ ಕೆಲಸಗಳನ್ನು ನಿರ್ವಹಿಸುವುದು. ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಸಾರ್ವಜನಿಕರು ಮಾಹಿತಿ ಹಕ್ಕಿನಡಿ ಕೇಳುವಂತಹ ಮಾಹಿತಿಯನ್ನು ಇವರು ನೀಡಬೇಕಾಗಿರುತ್ತದೆ.

**ಅಧೀಕ್ಷಕರು,ಬೆಂಗಳೂರು ಹೆಚ್ಚುವರಿ ಪಶ್ಚಿಮ.**

ವಿದ್ಯುತ್ ಗುತ್ತಿಗೆದಾರರ ಪರವಾನಿಗೆ, ಮೇಲ್ವಿಚಾರಕರ ಮತ್ತು ತಂತಿ ರಹದಾರಿಯ ಹೊಸ ಅರ್ಜಿಗಳನ್ನು ಉಪ ವಿದ್ಯುತ್ ಪರಿವೀಕ್ಷಕರ ನಿರ್ದೇಶನದಂತೆ ನಿರ್ವಹಿಸುವುದು. ಸೇವೆಗಳು ಮತ್ತು ಸೇವಾ ನಿಯಮಗಳ ಪರಿಪಾಲನೆ, ಹೆಚ್.ಆರ್.ಎಮ್.ಎಸ್‌ಗೆ ಸಂಬಂಧಪಟ್ಟಂತೆ ಕಾರ್ಯ ನಿರ್ವಹಣೆ, ಅಧೀನ ಕಛೇರಿಗಳಿಂದ ಬರುವ ಸಾದಿಲ್ವಾರು ಹಾಗು ಪ್ರಯಾಣ ವೆಚ್ಚಗಳ ಬಿಲ್ಲುಗಳನ್ನು ಪರಿಶೀಲಿಸಿ ಮೇಲುರುಜುವಿಗಾಗಿ ಮೇಲಧಿಕಾರಿಗಳಿಗೆ ಸಲ್ಲಿಸುವುದು, ಪೀಠೋಪಕರಣಗಳ ನಿರ್ವಹಣೆ, ಈ ಕಛೇರಿಯ ಹಾಗು ಖರ್ಚುವೆಚ್ಚ ತಖ್ತೆಗಳ ಕ್ರೋಢೀಕರಿಸುವುದು, ಅಂತೆಯೇ ಡಿಸಿಬಿಗಳ ಕ್ರೋಢೀಕೃತ ವರದಿಯನ್ನು ಸಿದ್ಧಪಡಿಸುವುದು, ಟ್ರೆಶರಿ ಚಲನ್‌ಗಳ ಮರುಹೊಂದಾಣಿಕೆ ತಖ್ತೆಯ ಕ್ರೋಢೀಕರಣ, ರಶೀದಿ ಹಾಗು ನಗದು ಪುಸ್ತಕ ನಿರ್ವಹಣೆ ಮತ್ತು ಕಛೇರಿಯಲ್ಲಿ ಸ್ವೀಕರಿಸಲಾದ ಸರಕಾರದ ಹಣವನ್ನು ಟ್ರೆಸರಿ/ಬ್ಯಾಂಕ್‌ಗೆ ಪಾವತಿಸುವುದು ಇತ್ಯಾದಿ. ಕಛೇರಿಯ ಆಡಳಿತ, ಲೆಕ್ಕ ಪತ್ರ, ಅನುದಾನ, ಆದಾಯ ತೆರಿಗೆ, ಮಾಹಿತಿ ಹಕ್ಕು ಅಧಿನಿಯಮ, ನ್ಯಾಯಾಲಯದ ಪ್ರಕರಣ, ವಿದ್ಯುಚ್ಛಕ್ತಿ ತೆರಿಗೆ ಇತ್ಯಾದಿ ಕೆಲಸ ಕಾರ್ಯಗಳಲ್ಲಿ ಮೇಲಾಧಿಕಾರಿಗಳಿಗೆ ಸಹಕರಿಸುವುದು, ಪ್ರಥಮ ದರ್ಜೆ ಸಹಾಯಕರ, ದ್ವಿತೀಯ ದರ್ಜೆ ಸಹಾಯಕರುಗಳ ವಿಷಯ ನಿರ್ವಹಣಾ ಕೆಲಸ ಕಾರ್ಯಗಳ ಮೇಲ್ವಿಚಾರಣೆ, ಹಣ ಸ್ವೀಕೃತಿ ರಸೀದಿಗೆ ಕಛೇರಿಯ ಮುಖ್ಯಸ್ಥರ ಪರವಾಗಿ ಸಹಿ ಮಾಡುವುದು, ಸಿನಿಮಾ ಆಪರೇಟರ್ ಸಕ್ಷಮ ಪ್ರಮಾಣ ಪತ್ರದ ನವೀಕರಣ ಮತ್ತು ಹಿಂಬರಹಗಳನ್ನು ವಿದ್ಯುತ್ ಪರಿವೀಕ್ಷಕರ ನಿರ್ದೇಶನದಂತೆ ನಿರ್ವಹಿಸುವುದು, ಮಹಾ ಲೇಖಪಾಲರ ಆಡಿಟ್‌ಗೆ ಸಹಕರಿಸುವುದು, ಆಡಿಟ್‌ಗೆ ಸಂಬಂಧಿಸಿದ ಕಂಡಿಕೆಗಳಿಗೆ ಉತ್ತರಗಳನ್ನು ಸಿದ್ದಪಡಿಸಿ ನಿರ್ವಹಿಸುವುದು. ಕಛೇರಿಗೆ ಸಂಬಂಧಪಟ್ಟಂತೆ ಆದಾಯ ತೆರಿಗೆಗಳ ರಿಟರ್ನ್‌ಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಹಾಗು ವಾರ್ಷಿಕವಾಗಿ ಅಪ್‌ಲೋಡ್ ಮಾಡಿಸಿ ಅಧಿಕಾರಿಗಳ ಹಾಗು ಸಿಬ್ಬಂದಿ ವರ್ಗದವರ ನಮೂನೆ 16 ಅನ್ನು ನೀಡುವುದು ಹಾಗು ಮೇಲಾಧಿಕಾರಿಗಳು ಸೂಚಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು. ಸಿಬ್ಬಂದಿ ವರ್ಗದವರ ಸೇವಾ ಪುಸ್ತಕಗಳನ್ನು ತಮ್ಮ ಅಧೀನದಲ್ಲಿ ಇರಿಸಿಕೊಳ್ಳುವುದು ಮತ್ತು ಸಿಬ್ಬಂದಿ ವರ್ಗದವರ ಆಸ್ತಿ ಮತ್ತು ಋಣಪಟ್ಟಿ ಸಂಬಂಧಿಸಿದಂತೆ ಕಡತಗಳ ನಿರ್ವಹಣೆ ಮಾಡುವುದು. ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಸಾರ್ವಜನಿಕರು ಮಾಹಿತಿ ಹಕ್ಕಿನಡಿ ಕೇಳುವಂತಹ ಮಾಹಿತಿಯನ್ನು ಇವರು ನೀಡಬೇಕಾಗಿರುತ್ತದೆ.

**ಪ್ರಥಮ ದರ್ಜೆ ಸಹಾಯಕರು, ಬೆಂಗಳೂರು ಹೆಚ್ಚುವರಿ ಪಶ್ಚಿಮ.**

ವಿದ್ಯುತ್ ಗುತ್ತಿಗೆದಾರರ ಪರವಾನಿಗೆ, ಮೇಲ್ವಿಚಾರಕರ ಮತ್ತು ತಂತಿ ರಹದಾರಿಯ ನವೀಕರಣದ ಅರ್ಜಿಗಳನ್ನು ಅಧೀಕ್ಷಕರ ನಿರ್ದೇಶನದಂತೆ ನಿರ್ವಹಿಸುವುದು.ಅಧಿಕಾರಿಗಳ ಹಾಗು ಸಿಬ್ಬಂದಿ ವರ್ಗಗಳ ವೇತನ ಬಿಲ್ಲುಗಳನ್ನು ಸಿದ್ಧಪಡಿಸುವುದು, ಗಳಿಕೆ ರಜೆ ನಗದೀಕರಣ ಹಾಗು ಸಾದಿಲ್ವಾರು ವೆಚ್ಚ ಇತ್ಯಾದಿ ಬಿಲ್ಲುಗಳನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು ಈ ಕಛೇರಿಯ ಖರ್ಚು ವೆಚ್ಚಗಳ ಅಂಕಿ ಅಂಶಗಳನ್ನು ಸಿದ್ಧಪಡಿಸಿ ಅಧೀಕ್ಷಕರಿಗೆ ಮಂಡಿಸುವುದು, ಚಲನ್ ಮರು ಹೊಂದಾಣಿಕೆಯನ್ನುದ್ವಿತೀಯ ದರ್ಜೆ ಸಹಾಯಕರ ಸಹಕಾರದೊಂದಿಗೆ ಸಿದ್ಧಪಡಿಸಿ, ಅಧೀಕ್ಷಕರಿಗೆ ಮಂಡಿಸುವುದು.ಡಿಸಿಬಿ ಪಟ್ಟಿಗಳ ನಿರ್ವಹಣೆ ಹಾಗುಅಧೀಕ್ಷಕರು ಮತ್ತು ಮೇಲಾಧಿಕಾರಿಗಳು ಸೂಚಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು.

**ದ್ವಿತೀಯ ದರ್ಜೆ ಸಹಾಯಕರು, ಬೆಂಗಳೂರು ಹೆಚ್ಚುವರಿ ಪಶ್ಚಿಮ.**

ಟಪಾಲು ಸ್ವೀಕೃತಿ ಮತ್ತು ರವಾನೆ ಪುಸ್ತಕಗಳ ನಿರ್ವಹಣೆ, ಎಫ್ ಮತ್ತು ಜಿ ನಮೂನೆಗಳ ಹಾಗೂ ಪುಸ್ತಕಗಳ ನಿರ್ವಹಣೆ, ಟ್ರೆಜರಿ ಚಲನ್‌ಗಳ ಮರುಹೊಂದಾಣಿಕೆ ತಖ್ತೆಯನ್ನು ಸಿದ್ಧಪಡಿಸಿ ಪ್ರಥಮ ದರ್ಜೆ ಸಹಾಯಕರಿಗೆ ಮಂಡಿಸುವುದು, ಸೇವಾ ಚೀಟಿಗಳ ಪುಸ್ತಕದ ನಿರ್ವಹಣೆ ಮಾಡುವುದು, ಗ್ರಾಹಕರಿಗೆ ಸಂಬಂಧಪಟ್ಟ ಕಡತಗಳ ನಿರ್ವಹಣೆ ಹಾಗು ಮೇಲಾಧಿಕಾರಿಗಳು ಸೂಚಿಸಿದ ಇತರೆ ಸರಕಾರಿ ಕೆಲಸಗಳನ್ನು ನಿರ್ವಹಿಸುವುದು.

**ಕಂಪ್ಯೂಟರ್ ಆಪರೇಟರ್**

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಆಪ್ತ ಸಹಾಯಕರಾಗಿ ಕಚೇರಿ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಹಾಗೂ ಇತರೆ ಅಧಿಕಾರಿಗಳು ಸೂಚಿಸುವ ಕೆಲಸ ಕಾರ್ಯಗಳು ಮತ್ತು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಬರುವ ಪತ್ರ ಮತ್ತು ಕಡತಗಳ ಚಲನವಲನಗಳನ್ನು ನಿರ್ವಹಿಸುವುದು. ಕಚೇರಿಯ ಎಲ್ಲಾ ಕಾಗದ ಪತ್ರಗಳನ್ನು ಗಣಕೀಕೃತ ಮಾಡುವುದು.

**ವಾಹನ ಚಾಲಕರು:** ಕಚೇರಿ ಮುಖ್ಯಸ್ಥರ ಮಾರ್ಗದರ್ಶನದಂತೆ ಕಚೇರಿಯ ಕೆಲಸಗಳಿಗೆ ವಾಹನವನ್ನು ಉಪಯೋಗಿಸುವುದು.

**ಹೆಲ್ಪರ್:** ಕಚೇರಿ ಮುಖ್ಯಸ್ಥರು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

**ಗ್ರೂಪ್ ಡಿ ನೌಕರರು:** ಕಚೇರಿ ಮುಖ್ಯಸ್ಥರು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

**III. ಕಛೇರಿಯ ಮೇಲ್ವಿಚಾರಣೆ ಹಾಗೂ ಜವಾಬ್ದಾರಿಗಳನ್ನು ಒಳಗೊಂಡಂತೆ ಕಾರ್ಯನಿರ್ವಹಣಾ ಕ್ರಮದಲ್ಲಿ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಪಾಲಿಸುವ ಕ್ರಮ:**

ಗ್ರಾಹಕರಿಂದ ಕಛೇರಿಯಲ್ಲಿ ಸ್ವೀಕರಿಸಲಾದ ವಿದ್ಯುತ್ ಪರಿವರ್ತಕಗಳ, ವಿದ್ಯುತ್ ಜನಕ ಮತ್ತು ಇತರೆ ವಿದ್ಯುತ್ ಸ್ಥಾವರಗಳಿಗೆ ಸಂಬಂಧಿಸಿದಂತೆ (ಆಯಾ ಅಧಿಕಾರಿಗಳ ವ್ಯಾಪ್ತಿಯಲ್ಲಿ ಬರುವ) ನೀಲಿ ನಕ್ಷೆ ಅನುಮೋದನೆ ಮಾಡುವುದು. ಇದರಲ್ಲಿ ಏನಾದರು ನ್ಯೂನತೆಗಳು ಇದ್ದಲ್ಲಿ ಗ್ರಾಹಕರಿಗೆ ಸೂಚಿಸುವುದು. ನೀಲಿ ನಕ್ಷೆ ಅನುಮೋದನೆ ಪ್ರಕಾರ ಗ್ರಾಹಕರು ತಮ್ಮ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಸೂಚನೆ ನೀಡುವುದು. ಅಧಿಕಾರ ಪ್ರತ್ಯಾಯೋಜನೆಯ ಅನುಸಾರ ಗ್ರಾಹಕರುಗಳ, ಬೆಸ್ಕಾಂ(ನಿ), ಕ.ವಿ.ಪ್ರ.ನಿ.ನಿ., ಎಲ್ಲಾ ವಿದ್ಯುತ್ ಸ್ಥಾವರಗಳ ಪ್ರಥಮ ಮತ್ತು ನಿಯತಕಾಲಿಕ ಪರಿವೀಕ್ಷಣೆಯನ್ನು ಮಾಡುವುದು, ಪರಿವೀಕ್ಷಣೆಯ ಸಂದರ್ಭದಲ್ಲಿ ಕಂಡುಬಂದ ನ್ಯೂನತೆಗಳನ್ನು ಸಂಬಂಧಪಟ್ಟವರಿಗೆ ತಿಳಿಸುವುದು ಮತ್ತು ತತ್ಸಂಬಂಧಪರಿವೀಕ್ಷಣಾ ಶುಲ್ಕಗಳನ್ನು ಸರಕಾರಕ್ಕೆ ಪಾವತಿಸುವಂತೆ ಸೂಚಿಸುವುದು. ಅಧಿಕಾರ ಪ್ರತ್ಯಾಯೋಜನೆಯ ಅನುಸಾರ ವಿದ್ಯುತ್ ಅಪಘಾತ ಹಾಗು ಬೆಂಕಿ ಅಪಘಾತಗಳ ತನಿಖೆಗಳನ್ನು ನಡೆಸಿ, ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

**IV. ಪರಿವೀಕ್ಷಣಾ ಕಾರ್ಯಗಳನ್ನು ಯಾವ ರೀತಿ ನಿರ್ವಹಿಸಬೇಕಾಗಿದೆ ಎಂಬುದಕ್ಕೆ ನಿಗದಿಪಡಿಸಿರುವ ಕೈಪಿಡಿ:**

ಕಛೇರಿ ಕಾರ್ಯ ವಿದಾನ ಕೈಪಿಡಿಯಲ್ಲಿ ತಿಳಿಸಿರುವಂತೆ ಕಛೇರಿಯ ದೈನಂದಿನ ಕಾರ್ಯಗಳನ್ನು ನಿರ್ವಹಿಸುವುದು. ಅಧಿಕಾರ ಪ್ರತ್ಯಾಯೋಜನೆಗೆ ಅನುಸಾರವಾಗಿ ವಿದ್ಯುತ್ ಸ್ಥಾವರಗಳ ನಕ್ಷೆ ಅನುಮೋದನೆ, ಪರಿವೀಕ್ಷಣೆ

ಮತ್ತು ಅಂತಿಮ ಅನುಮೋದನೆಗಳನ್ನು ಇಲಾಖೆಯ ಪರಿವೀಕ್ಷಣೆ ಕೈಪಿಡಿಯಲ್ಲಿ ಸೂಚಿಸಿದಂತೆ ಮಾಡುವುದು. ತೆರಿಗೆ ಕೈಪಿಡಿಯನ್ವಯ ವಿದ್ಯುತ್ ತೆರಿಗೆ ವಸೂಲಾತಿಗೆ ಕ್ರಮ ಕೈಗೊಳ್ಳುವುದು ಮತ್ತು ಲಿಫ್ಟ್ ವಿದ್ಯುತ್ ಸ್ಥಾವರಗಳನ್ನು ಲಿಫ್ಟ್ ಕಾಯ್ದೆ ಮತ್ತು ನಿಯಮಗಳ ಅನ್ವಯ ಪರಿವೀಕ್ಷಣೆ ಮಾಡುವುದು. ಕರ್ನಾಟಕ ಸಿನೆಮಾ ನಿಯಮಗಳ ಅನ್ವಯ ಸಿನೆಮಾ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮಾಡುವುದು.

**V. ಪರಿವೀಕ್ಷಣಾ ಕಾರ್ಯಗಳನ್ನು ನಿರ್ವಹಿಸಲು ಕಛೇರಿಯ ಅಧಿಕಾರಿ ಸಿಬ್ಬಂದಿ ವರ್ಗದವರು ಉಪಯೋಗಿಸಿ ನಿರ್ವಹಿಸುತ್ತಿರುವ ನಿಯಮ ಹಾಗೂ ಕಾಯ್ದೆಗಳ ಪುಸ್ತಕಗಳು ಹಾಗೂ ವಿವಿಧ ಕೈಪಿಡಿಗಳು:**

1) ಕೆ.ಸಿ.ಎಸ್.ಆರ್ – 1958.
2) ಕೆ.ಎಫ್.ಸಿ– 1958.
3) ಕೆ.ಟಿ.ಸಿ.
4) ಆಯ ವ್ಯಯ ಕೈಪಿಡಿ.
5) ಕಚೇರಿ ಕಾರ್ಯ ವಿಧಾನ ಕೈಪಿಡಿ.
6) ಕೆ.ಸಿ.ಎಸ್ (ಸಾಮಾನ್ಯ ನೇಮಕಾತಿ) 1977.
7) ಕೆ.ಸಿ.ಎಸ್ (ಪ್ರೋಬೇಷನ್) 1977.
8) ಕೆ.ಸಿ.ಎಸ್ (ಸಿಸಿಎ) ನಿಯಮಗಳು– 1957.
9) ಕೆ.ಸಿ.ಎಸ್ (ಕಾಂಡಕ್ಟ್) ನಿಯಮಗಳು– 1966.
10) ಕೆ.ಸಿಎಸ್ (ಜೇಷ್ಠತಾ) ನಿಯಮಗಳು.
11) ಕೆ.ಸಿ.ಎಸ್ (ಪಿಪಿಪಿ) ಆ್ಯಕ್ಟ್ 1973 ಮತ್ತು ನಿಯಮಗಳು– 1978.
12) ಭಾರತೀಯ ವಿದ್ಯುತ್ ಕಾಯ್ದೆ – 2003
13) ಭಾರತೀಯ ವಿದ್ಯುತ್ ನಿಯಮಗಳು –1956.
14) ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ (ವಿದ್ಯುತ್ ಸುರಕ್ಷತಾ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಕ್ರಮಗಳು) ಅಧಿನಿಯಮಗಳು 2010
15) ಕರ್ನಾಟಕ ಸಿನಿಮಾ (ನಿಯಂತ್ರಣ) ಕಾಯ್ದೆ 1964 ಮತ್ತು ನಿಯಮಗಳು 2014.
16) ಕರ್ನಾಟಕ ಲಿಫ್ಟ್ ಕಾಯ್ದೆ 1974 ಮತ್ತು ನಿಯಮಗಳು – 1976 ಹಾಗೂ (ಲಿಫ್ಟ) 2015
17) ಕರ್ನಾಟಕ ವಿದ್ಯುತ್ ಗುತ್ತಿಗೆದಾರರ ಪರವಾನಿಗೆ ಮತ್ತು ವಿದ್ಯುತ್ ಪರ್ಯವೇಕ್ಷಕರ ಮತ್ತು ತಂತಿಕೆಲಸಗಾರರ ರಹದಾರಿ ನೀಡುವಿಕೆ. – 2012.
18) ಕರ್ನಾಟಕ ವಿದ್ಯುಚ್ಛಕ್ತಿ ಬಳಕೆಯ ಮೇಲಣ ತೆರಿಗೆ ಕಾಯ್ದೆ –1959 ಮತ್ತು ನಿಯಮಗಳು – 1959 ಹಾಗೂ ತೆರಿಗೆ ನಿಯಮಗಳು 2014
19) ನ್ಯಾಷನಲ್ ಎಲೆಕ್ಟ್ರಿಸಿಟಿ ಕೋಡ್ – 1985.
20) ಕಚೇರಿ ಕೈಪಿಡಿ.

**VI. ಕಛೇರಿಯ ನಿಯಂತ್ರಣದಲ್ಲಿ ಇಡತಕ್ಕ ವಿವಿಧ ದಾಖಲೆ ಹಾಗೂ ಪುಸ್ತಕಗಳ ವಿವರಗಳು.**

1 ವೇತನ, ಸಾಲ ಮತ್ತು ಮುಂಗಡಗಳ ವಿವರಗಳ ಪುಸ್ತಕ.
2. ಸೇವಾ ಪುಸ್ತಕಗಳು.
3. ವೇತನ ಹಾಗೂ ಪ್ರಯಾಣ ಭತ್ಯೆಯ ಅಕ್ವಿಟೆನ್ಸ್ ಪುಸ್ತಕಗಳು.
4. ಬಿಲ್ ಪುಸ್ತಕ.
5. ರಜೆಗೆ ಸಂಬಂಧಪಟ್ಟ ಕಡತ.
6. ಅನುದಾನ ಮತ್ತು ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಅನುದಾನ ಹಂಚಿಕೆಗಳ ಪುಸ್ತಕ.
8. ಖರ್ಚು ವೆಚ್ಚಗಳ ಪುಸ್ತಕ ಹಾಗೂ ಕಡತಗಳು.
9. ಖಜಾನೆಯ ಚಲನ್‌ಗಳ ಮರುಹೊಂದಾಣಿಕೆ(0043) ತಖ್ತೆಯ ಪುಸ್ತಕ.
10. ಸಿಬ್ಬಂದಿಗಳ ಸೇವೆಗೆ ಸಂಬಂಧಪಟ್ಟ ಕಡತಗಳು.
11. ವೈದ್ಯಕೀಯ ಖರ್ಚುಗಳ ಮರುಪಾವತಿಯ ಕಡತಗಳು.
12. ಸ್ವೀಕೃತಿ ಮತ್ತು ರವಾನೆ ವಹಿಗಳು.
13. ಕಛೇರಿ ಆದೇಶ ಪುಸ್ತಕ.

14. ಸರಕಾರಿ ಆದೇಶ/ಸುತ್ತೋಲೆಗಳ ಪುಸ್ತಕ.
15. ವಿದ್ಯುಚ್ಛಕ್ತಿ ತೆರಿಗೆಗೆ ಸಂಬಂಧಪಟ್ಟ ಕಡತಗಳು.
16. ನಗದು ಪುಸ್ತಕ.
17. ಡಿ.ಡಿ./ಚೆಕ್‌ಗಳ ಸ್ವೀಕೃತಿ ಮತ್ತು ಬ್ಯಾಂಕಿಗೆ ಜಮಾವಣೆ ಮಾಡುವ ಪುಸ್ತಕ
18. ಖಾಯಂ ಮುಂಗಡದ ಖರ್ಚು–ವೆಚ್ಚಗಳ ಪುಸ್ತಕ.
19. ಸಿನೆಮಾ ಚಾಲಕರ ಪರ್ಮಿಟ್‌ಗಳ ನವೀಕರಣ ಹಾಗೂ ಹಿಂಬರಹಗಳ ಪುಸ್ತಕ.
20. ವಿದ್ಯುತ್‌ಗುತ್ತಿಗೆದಾರರ ಪರವಾನಿಗೆಗಳ ಹೊಸ ಮತ್ತು ನವೀಕರಣ ಅರ್ಜಿಗಳ ಸ್ವೀಕೃತಿ ಪುಸ್ತಕಗಳು.
21. ವಿದ್ಯುತ್/ಮೈನಿಂಗ್ ಮೇಲ್ವಿಚಾರಕರು/ತಂತಿ ಕೆಲಸಗಾರರ ಹೊಸ ಮತ್ತು ನವೀಕರಣ ಅರ್ಜಿಗಳ ಸ್ವೀಕೃತಿ ಪುಸ್ತಕಗಳು.
22. ಗ್ರಾಹಕ ಹಾಗೂ ವಿದ್ಯುತ್ ಗುತ್ತಿಗೆದಾರರ ನಡುವಣ ವ್ಯಾಜ್ಯಗಳ ಕಡತ.
23. ವಿದ್ಯುತ್/ಮೈನಿಂಗ್ ಮೇಲ್ವಿಚಾರಕರು/ತಂತಿ ಕೆಲಸಗಾರರ ಪರೀಕ್ಷಾ ಅರ್ಜಿಗಳ ಸ್ವೀಕೃತಿ ವಹಿಗಳು.
24. ವಿದ್ಯುತ್ ಸ್ಥಾವರಗಳ ನಕ್ಷೆ ಅನುಮೋದನಾ ಪುಸ್ತಕಗಳು.
25. ವಿದ್ಯುತ್ ಸ್ಥಾವರಗಳ ಚಾಲನಾ ಅನುಮೋದನಾ ಪುಸ್ತಕಗಳು.
26. ಮಾಹಿತಿ ಹಕ್ಕು ನಿಮಗಳುಗೆ ಸಂಬಂಧಪಟ್ಟಂತೆ ಪುಸ್ತಕ ಹಾಗೂ ಕಡತ.
27. ವಿದ್ಯುತ್ ಅಪಘಾತ ಹಾಗು ಬೆಂಕಿ ಅಪಘಾತಗಳ ವಿವರಗಳನ್ನು ದಾಖಲಿಸುವ ಪುಸ್ತಕಗಳು.
28. ವಿವಿಧ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣಾ ಪುಸ್ತಕ.
29. ಮಾಸಿಕ ಪ್ರಗತಿ ವರದಿಗಳ, ವಿದ್ಯುತ್ ಸ್ಥಾವರಗಳ ಮತ್ತು ವಿದ್ಯುತ್ ಅಪಘಾತಗಳ ಅಂಕಿ–ಅಂಶಗಳ ಕಡತಗಳು.
30. ಆದಾಯ ತೆರಿಗೆಗೆ ಸಂಬಂಧಪಟ್ಟ ಕಡತಗಳು.
31. ಕಛೇರಿಯ ಬಾಡಿಗೆ ವಾಹನದ ಕಡತ.
32. ಸೇವಾ ಅಂಚೆಚೀಟಿಗಳಿಗೆ ಸಂಬಂಧಪಟ್ಟ ಪುಸ್ತಕ.
30. ಸರ್ಕಾರ ಹಾಗೂ ಮುಖ್ಯ ವಿದ್ಯುತ್ ಪರಿವೀಕ್ಷರವರು ಹೊರಡಿಸುವ ತಾಂತ್ರಿಕ ಸುತ್ತೋಲೆಗಳ ಕಡತ.

VII. ಕಛೇರಿಯ ನೀತಿ ನಿಯಮಗಳನ್ನು ಮಾಡುವಲ್ಲಿ ಸಾರ್ವಜನಿಕ ಮೆಂಬರ್‌ಗಳ ಭಾಗವಹಿಸುವಿಕೆ:
ಅನ್ವಯಿಸುವುದಿಲ್ಲ.

VIII. ಕಛೇರಿಯ ಕಾರ್ಯ ವೈಖರಿಯಲ್ಲಿ ಸೂಕ್ತ ಸೂಚನೆ ಸಲಹೆಗಳನ್ನು ನೀಡಲು ಇರುವ ಸಮಿತಿ, ಕೌನ್ಸಿಲ್, ಮಂಡಳಿ, ಇತ್ಯಾದಿಗಳ ವಿವರಗಳು ಹಾಗೂ ಇವುಗಳ ವತಿಯಿಂದ ನಡೆಸಲಾಗುವ ಸಭೆಗಳಿಗೆ ಸರ್ವಜನಿಕರು ಭಾಗವಹಿಸಬಹುದೇ? ಹಾಗೂ ಇಂತಹ ಸಭೆಯ ನಡಾವಳಿಗಳು ಸಾರ್ವಜನಿಕರಿಗೆ ಲಭ್ಯವಿರುತ್ತದೆಯೇ?

ಅನ್ವಯಿಸುವುದಿಲ್ಲ.

IX.ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರುಕಛೇರಿ, ಬೆಂಗಳೂರು ಹೆಚ್ಚುವರಿ ಪಶ್ಚಿಮ,1ನೇ ಮಹಡಿ, ನಂ.221 ಜೆನಿತ್ ಕಟ್ಟಡ, 2ನೇ ಹಂತ, 12ನೇ ಬ್ಲಾಕ್, ಮುಖ್ಯ ರಸ್ತೆ, ನಾಗರಭಾವಿ, ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಹಾಗು ಸಿಬ್ಬಂದಿಗಳ ವಿವರ:

| ಕ್ರಸಂ | ಹೆಸರು | ಹುದ್ದೆ | ದೂರವಾಣಿ ಸಂಖ್ಯೆ | ವೇತನ ಶ್ರೇಣಿ | ಕೆಲಸಕ್ಕೆ ಹಾಜಾರದ ದಿನಾಂಕ |
|---|---|---|---|---|---|
| 1 | ಶ್ರೀ. ಶ್ರೀನಿವಾಸ. ಎಂ.ಸಿ | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | 080–23210942 | 74400-109600 | 13.02.2020 |
| 2 | ಶ್ರೀ. ನಾಗರಾಜ್ | ವಿದ್ಯುತ್ ಪರಿವೀಕ್ಷಕರು | 080–23210942 | 67550-104600 | 14.02.2020 |
| 3 | ಶ್ರೀಮತಿ, ರಾಧ. ಜಿ | ಉಪ ವಿದ್ಯುತ್ ಪರಿವೀಕ್ಷಕರು | 080–23210942 | 52650-97100 | 07.09.2020 |
| 4 | ಶ್ರೀಮತಿ ಗೀತಾ.ಟಿ, | ಸಹಾಯಕ ವಿದ್ಯುತ್ ಪರಿವೀಕ್ಷಕರು | 080– | 43100-83900 | 15.05.2014 |

| | | | | | |
|---|---|---|---|---|---|
| | | (ಕಛೇರಿ), | 23210942 | | |
| 5 | ಖಾಲಿ | ಸಹಾಯಕ ವಿದ್ಯುತ್ ಪರಿವೀಕ್ಷಕರು–2 (ಕ್ಷೇತ್ರೀಯ) | | 43100-83900 | |
| 6 | ಖಾಲಿ | ಸಹಾಯಕ ವಿದ್ಯುತ್ ಪರಿವೀಕ್ಷಕರು–1 (ಕ್ಷೇತ್ರೀಯ) | | 43100-83900 | |
| 7 | ಶ್ರೀಮತಿ. ಎನ್. ಸೌಭಾಗ್ಯವತಿ | ಅಧೀಕ್ಷಕರು | 080–23210942 | 37900-70850 | 01.10.2021 |
| 8 | ಕು. ಶ್ವೇತಾ. ಎನ್** | ಪ್ರ.ದ.ಸ | | 27650-52650 | |
| 9 | ಹೇಮೇಶ್ ಜಿ. ಎ | ದ್ವಿತೀಯ ದರ್ಜೆ ಸಹಾಯಕರು –1 | 080–23210942 | 21400-42000 | 25.06.2019 |
| 10 | ಖಾಲಿ | ದ್ವಿತೀಯ ದರ್ಜೆ ಸಹಾಯಕರು –2 | | 21400-42000 | |
| 11 | ಖಾಲಿ | ವಾಹನ ಚಾಲಕರು | | 21400-42000 | |
| 12 | ಖಾಲಿ | ಸಹಾಯಕರು | | 18600-32600 | |
| 13 | ಹುಸೇನ್ ಖಾನ್ | ಕಂಪ್ಯೂಟರ್ ಆಪರೇಟರ್ | ತಾತ್ಕಾಲಿಕ | Outsourcing | |
| 14 | ಶ್ರೀ.ರವಿ ವಿ | ಗ್ರೂಪ್–ಡಿ | ತಾತ್ಕಾಲಿಕ | Outsourcing | |

** ಕು. ಶ್ವೇತಾ. ಎನ್– ಪ್ರ.ದ.ಸ ರವರು ದಿನಾಂಕ : 13.10.2021 ರಿಂದ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿಯಲ್ಲಿ ಪ್ರತಿನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

X. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ಕಛೇರಿಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದ ಮಂಜೂರಾದ ಹುದ್ದೆಗಳ ಸಂಖ್ಯೆ ಹಾಗೂ ವೇತನ ಶ್ರೇಣಿಯ ವಿವರಗಳು:

| ಕ್ರ. ಸಂ | ಹುದ್ದೆಯ ವರ್ಗ | ಮಂಜೂರಾದ ಸಂಖ್ಯೆ | ವೇತನ ಶ್ರೇಣಿ |
|---|---|---|---|
| 1. | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆ.ಹೆ.ಪ. | 01 | 74400-109600 |
| 2. | ವಿದ್ಯುತ್ ಪರಿವೀಕ್ಷಕರು, ಬೆ.ಹೆ.ಪ. | 01 | 67550-104600 |
| 3. | ಉಪ ವಿದ್ಯುತ್ ಪರಿವೀಕ್ಷಕರು, ಬೆ.ಹೆ.ಪ. | 01 | 52650-97100 |
| 4. | ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆ.ಹೆ.ಪ. | 03 | 43100-83900 |
| 5. | ಅಧೀಕ್ಷಕರು | 01 | 37900-70850 |
| 6. | ಪ್ರಥಮ ದರ್ಜೆ ಸಹಾಯಕರು | 01 | 27650-52650 |
| 7. | ದ್ವಿತೀಯ ದರ್ಜೆ ಸಹಾಯಕರು | 02 | 21400-42000 |
| 8. | ವಾಹನ ಚಾಲಕರು | 01 | 21400-42000 |
| 9. | ಸಹಾಯಕರು | 01 | 18600-32600 |
| 10. | ಕಂಪ್ಯೂಟರ್ ಆಪರೇಟರ್ | 01 | Outsourcing |
| 11. | ಗ್ರೂಪ್–ಡಿ | 01 | Outsourcing |
| | **ಒಟ್ಟು** | **14** | |

XI. ಪ್ರತಿಯೊಂದು ಏಜೆನ್ಸಿಗೂ ಮಂಜೂರಾದ ಅನುದಾನ ಹಾಗೂ ಈ ಕಛೇರಿಯಿಂದ ಕೈಗೊಳ್ಳಲಾಗುವ ಪ್ಲ್ಯಾನ್ಡ್ ಪ್ರೊಗ್ರಾಮ್ ಅವುಗಳಿಗೆ ತಗಲುವ ಅಂದಾಜು ವೆಚ್ಚ ಹಾಗೂ ಸಾಧನೆ ಆದ ನಂತರದ ವಿವರಗಳು:

ಈ ಕಛೇರಿಗೆ ಯಾವುದೇ ಪ್ಲ್ಯಾನ್ಡ್ ಪ್ರೊಗ್ರಾಮ್ ಇರುವುದಿಲ್ಲ.

XII. ಸಬ್ಸಿಡಿ ಪ್ರೊಗ್ರಾಮ್‌ಗಳು ಹಾಗೂಅವುಗಳಿಗೆ ಹಂಚಿಕೆಯಿಂದ ಅನುದಾನ ಹಾಗೂ ಫಲಾನುಭವಿಗಳ ವಿವರಗಳು:

ಅನ್ವಯಿಸುವುದಿಲ್ಲ.

XIII. ರಿಯಾಯಿತಿಗಳನ್ನು ಪಡೆದುಕೊಳ್ಳುವ ಫಲಾನುಭವಿಗಳು:

ಅನ್ವಯಿಸುವುದಿಲ್ಲ.

XIV. ವಿದ್ಯುನ್ಮಾನ ನಮೂನೆಯಲ್ಲಿ ಇಲಾಖೆಯ ಕ್ರೋಢಿಕೃತ ಮಾಹಿತಿಗಳನ್ನು ಇಟ್ಟುಕೊಳ್ಳುವ ಬಗ್ಗೆ:

ವಿದ್ಯುನ್ಮಾನ ನಮೂನೆಯಲ್ಲಿ ನಿರ್ವಹಿಸಲಾದ ಕಡತಗಳ ಕ್ರೋಢಿಕೃತ ಮಾಹಿತಿಗಳು ಕಂಪ್ಯೂಟರ್‌ನಲ್ಲಿ ಲಭ್ಯವಿರುತ್ತದೆ.

XV. ಸಾರ್ವಜನಿಕರಿಗೆ ಮಾಹಿತಿ ಪಡೆಯಲು ಒದಗಿಸಿರುವ ಸವಲತ್ತುಗಳು, ಸಾರ್ವಜನಿಕರಿಗಾಗಿ ಇಟ್ಟಿರುವ ಲೈಬ್ರರಿ ಅಥವಾ ರೀಡಿಂಗ್ ರೂಮ್‌ನ ಕೆಲಸದ ಸಮಯದ ವಿವರಗಳು:

ಸಾರ್ವಜನಿಕರು ಈ ಕಛೇರಿಯ ಕೆಲಸದ ಅವಧಿಯಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿರುತ್ತದೆ.

**XVI. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಮತ್ತು ಪದನಾಮಗಳ ವಿವರಗಳು:**

| ಕ್ರ. ಸಂ | ಹುದ್ದೆಯ ವರ್ಗ | ಹೆಸರು<br>ಶ್ರೀಯುತ/ಶ್ರೀಮತಿ | ದೂರವಾಣಿ ಸಂಖ್ಯೆ |
|---|---|---|---|
| 1. | ವಿದ್ಯುತ್ ಪರಿವೀಕ್ಷಕರು, ಬೆಂ.ಹೆ.ಪ. | ಶ್ರೀ ನಾಗರಾಜ್, ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂ.ಹೆ.ಪ. (ಪರಿವೀಕ್ಷಣಾ ವ್ಯಾಪ್ತಿ ಹಾಗೂ ಅಧಿಕಾರ ಪ್ರತಿ ನಿಯೋಜನೆ ಅನುಸಾರ ಹಾಗು ಕಛೇರಿಯ ತಾಂತ್ರಿಕ ವಿವರಗಳು) | 080–23210942 |
| 2. | ಉಪ ವಿದ್ಯುತ್ ಪರಿವೀಕ್ಷಕರು, ಬೆಂ.ಹೆ.ಪ. | ಶ್ರೀಮತಿ, ರಾಧ. ಜಿ. ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂ.ಹೆ.ಪ. (ಪರಿವೀಕ್ಷಣಾ ವ್ಯಾಪ್ತಿ ಹಾಗೂ ಅಧಿಕಾರ ಪ್ರತಿ ನಿಯೋಜನೆ ಅನುಸಾರ) | 080–23210942 |
| 3. | ಸಹಾಯಕ ವಿದ್ಯುತ್ ಪರಿವೀಕ್ಷಕರು(ಕಛೇರಿ), | ಶ್ರೀಮತಿ ಗೀತಾ, ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂ.ಹೆ.ಪ. (ಪರಿವೀಕ್ಷಣಾ ವ್ಯಾಪ್ತಿ ಹಾಗೂ ಅಧಿಕಾರ ಪ್ರತಿ ನಿಯೋಜನೆ ಅನುಸಾರ ಹಾಗು ಕಛೇರಿಯ ತಾಂತ್ರಿಕ ವಿವರಗಳು) | 080–23210942 |
| 4. | ಅಧೀಕ್ಷಕರು | ಶ್ರೀಮತಿ. ಎನ್. ಸೌಭಾಗ್ಯವತಿ, ಸಾರ್ವಜನಿಕ ಮಾಹಿತಿ ಅಧಿಕಾರಿ, ಬೆಂ.ಹೆ.ಪ. (ಕಛೇರಿಯ ಆಡಳಿತಕ್ಕೆ ಸಂಬಂಧಿಸಿದ ವಿವರಗಳು) | 080–23210942 |

**XVI.ಮೇಲ್ಮನವಿ ಪ್ರಾಧಿಕಾರ ಹಾಗು ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಮತ್ತು ಪದನಾಮಗಳ ವಿವರಗಳು:**

| ಕ್ರ. ಸಂ | ಹುದ್ದೆಯ ವರ್ಗ | ಹೆಸರು<br>ಶ್ರೀಯುತ/ಶ್ರೀಮತಿ | ದೂರವಾಣಿ ಸಂಖ್ಯೆ |
|---|---|---|---|
| 1. | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂ.ಹೆ.ಪ. | ಶ್ರೀ.ಶ್ರೀನಿವಾಸ. ಎಂ.ಸಿ ಮೇಲ್ಮನವಿ ಪ್ರಾಧಿಕಾರ ಬೆಂ.ಹೆ.ಪ. | 080–23210942 |

XVII. ಮಾಹಿತಿ ಹಕ್ಕು ನಿಯಮಕ್ಕೆ ಸಂಬಂಧಪಟ್ಟಂತೆ ಬೇರಾವುದೇ ಮಾಹಿತಿ ಹಾಗೂ ಈ ಮಾಹಿತಿಯನ್ನು ಪ್ರತೀ ವರ್ಷ ಪರಿಷ್ಕರಿಸಿ ಸಾರ್ವಜನಿಕರಿಗೆ ತೆರೆದಿಡುವ ಬಗ್ಗೆ:

ಪ್ರತೀ ವರ್ಷ ಮಾಹಿತಿ ಹಕ್ಕು ಅಧಿನಿಯಮದ ಮೇರೆಗೆ ಮಾಹಿತಿಯನ್ನು ಪರಿಷ್ಕರಿಸಿ ಸಾರ್ವಜನಿಕರಿಗೆ ತೃಪ್ತಿಯಾಗುವಂತೆ ಡಾಟಬೇಸನ್ನು ಅಪ್‌ಡೇಟ್ ಮಾಡಲಾಗುವುದು.

ತಮ್ಮ ವಿಶ್ವಾಸಿ,

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು
ಬೆಂಗಳೂರು ಹೆಚ್ಚುವರಿ ಪಶ್ಚಿಮ.

ಮೆ.ಮೊ ಸಂಖ್ಯೆ : ಉಮುವಿಪ( ಬೆಹೆಪ)/ಸವಿಪ/RTI-17/4331-32/2021-22 ದಿನಾಂಕ : 19 MAR 2022

ಪ್ರತಿಯನ್ನು :

1. ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ರವರ ಘನ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕ.ಕ ಮತ್ತು ಮು.ಕ